<u>ಪಿಡಬ್ಲ್ಯು-1</u>

<u>ದಿನಾಂಕಃ **07-02-2026** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎ.ಆರ್. ವಕೀಲರಿಂದಃ-</u>

ನಿಪಿ-**7** ನ್ನು ವಿಜಯಕುಮಾರ್ ಎನ್ನುವವರು ವಾರ್ತಾ ಇಲಾಖೆಯಿಂದ ಪಡೆದುಕೊಂಡಿರುತ್ತಾರೆ. ಸದರಿ ವಿಜಯಕುಮಾರ್ ರವರಿಗೆ ಸದರಿ ಕೇಸಿನಲ್ಲಿ ಯಾವುದೇ ಆಸಕ್ತಿ ಇಲ್ಲ. ನನ್ನ ಪರವಾಗಿ ದಾಖಲೆಗಳನ್ನು ಪಡೆದುಕೊಳ್ಳಿ ಎಂದು ವಿಜಯಕುಮಾರ್ ರವರಿಗೆ ನಾನು ಅಧಿಕಾರ ಪತ್ರ ಬರೆದುಕೊಟ್ಟಿಲ್ಲ ನನಗೆ ಆಗ ಹುಷಾರಿಲ್ಲದ ಕಾರಣ ಪಡೆದುಕೊಳ್ಳಿ ಎಂದು ನಾನು ಹೇಳಿದ್ದೆ. ಈ ರೀತಿ ನನಗೆ ಹುಷಾರಿರಲಿಲ್ಲ ದಾಖಲೆಗಳನ್ನು ಪಡೆದುಕೊಳ್ಳಿ ಎಂದು ನಾನು ವಿಜಯಕುಮಾರ್ ರವರಿಗೆ ಹೇಳಿದ್ದೆ ಎಂದು ನಾನು ಇದೇ ಮೊದಲನೇ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಈ ರೀತಿ ದಾಖಲೆಗಳನ್ನು ವಾರ್ತಾ ಇಲಾಖೆಯಿಂದ ಪಡೆದುಕೊಂಡ ಮೇಲೆ ಪುನಃ ನಾನು ಆ ರೀತಿ ದಾಖಲೆಗಳನ್ನು ಪಡೆದುಕೊಂಡಿಲ್ಲ. ಈ ಕೇಸನ್ನು ಹಾಕುವಾಗ ಆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ನಾನೇ ಹೇಳಿದ್ದರಿಂದ ನನ್ನ ದಾಖಲೆಗಳನ್ನು ವಿಜಯಕುಮಾರ್ ರವರು ವಾರ್ತಾ ಇಲಾಖೆಯಿಂದ ಪಡೆದುಕೊಂಡಿರುತ್ತಾರೆ. ವರದಿಗಾರರು ಪ್ರತಿವರ್ಷ ಸಂಬಂಧಪಟ್ಟ ವಾರ್ತಾ ಇಲಾಖೆಯಿಂದ ಪರವಾನಗೆಯನ್ನು ನವೀಕರಣಗೊಳಿಸಿಕೊಳ್ಳಬೇಕು. ಪ್ರತಿವರ್ಷ ಪರವಾನಗೆ ಮಾರ್ಚ್ ನಿಂದ ಏಪ್ರಿಲ್ ವರೆಗೆ ಚಾಲ್ತಿಯಲ್ಲಿರುತ್ತದೆ. ನಿಡಿ-**1** ರಲ್ಲಿ ವಿವಾದಿತ ಸುದ್ದಿ ಪ್ರಕಟವಾದ ದಿನದ ದಾಖಲೆ ಎಂದರೆ ಸರಿ. ನಿಡಿ-**2** ನಾನು ಕೊಟ್ಟ ಅರ್ಜಿ ಎಂದರೆ ಸರಿ. ನಿಡಿ-**1** ರಲ್ಲಿ ಹೇಳಿದಂತ ವಿಷಯದ ಆಧಾರದ ಮೇಲೆ ಆ ದಿನ ಸುದ್ದಿ ಪ್ರಕಟ ಆಗಿರುತ್ತದೆ ಎಂದರೆ ಸುಳ್ಳು. ನಿಪಿ-**8** ರಲ್ಲಿ ಇಸ್ವಿ ಇದ್ದು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಎಂದು ನಮೂದು ಇಲ್ಲ. **2016-17** ನೇ ಸಾಲಿನ ಎಷ್ಟನೇ ತಾರೀಖಿನ ಮೀಟಿಂಗ್ ನಲ್ಲಿ ನನ್ನ ಹೆಸರು ಅಪ್ರೂ ಆಗಿದೆ ಎಂದು ಗೊತ್ತಿಲ್ಲ. ಪ್ರತಿವರ್ಷ ಮಾರ್ಚ್ ನಿಂದ ಮುಂದಿನ ಮಾರ್ಚ್ ರವರೆಗೆ ಪರವಾನಗೆ ನವೀಕರಣಗೊಳಿಸಬೇಕಾಗುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಈ ವಿವಾದಿತ ಸುದ್ದಿ ಪ್ರಕಟ ಆದಾಗ ಹಾಸನ ಜಿಲ್ಲಾ

ವಾರ್ತಾ ಇಲಾಖೆಯಲ್ಲಿ ನನ್ನ ಹೆಸರು ಅಪ್ರೂ ಆಗಿರಲಿಲ್ಲ ಎಂದರೆ ಸರಿಯಲ್ಲ. ವಿವಾದಿತ ಪತ್ರಿಕೆಯಲ್ಲಿ ನನಗೆ ಮಾನಹಾನಿಯಾಗುವಂತಹ ಯಾವುದೇ ಸುದ್ದಿ ಪ್ರಕಟ ಆಗಿಲ್ಲ ಎಂದರೆ ಸುಳ್ಳು. ಈ ರೀತಿ ನನ್ನ ವಿರುದ್ದ ಸುದ್ದಿ ಪ್ರಕಟಣೆ ಆದ ಬಗ್ಗೆ ಬೇರೆ ಯಾರು ನನಗೆ ತಿಳಿಸಿಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **07-02-2026.**